ಜಕ್ಕೂರಿಂ ವಿಮಾನ ಹಾರಾಟ ತರಬೇತಿಯ ಬಗ್ಗೆ

೧೮೧೭. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿ, ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಕ್ಕೂರಿನ ಫ್ಲೈಯಿಂಗ್ ಶಾಲೆಗಾಗಿ ಸರ್ಕಾರ ಖರ್ಚು ಮಾಡುತ್ತಿರುವ ಹಣವೆಷ್ಟು? (ಪಾರ್ಷಿಕ ವಿವರ ನೀಡುವುದು).

ಆ) ಇಲ್ಲಿಯ ತರಬೇತಿ ವಿಮಾನಗಳು ಹಾಗೂ ತರಬೇತಿದಾರರ ಸಂಖ್ಯೆ ಎಷ್ಟು?

ಇ) ಹಾರಾಟ ತರಬೇತಿಯನ್ನು ಎಷ್ಟು ಗಂಟೆಗಳು ಇಲ್ಲಿ ನೀಡಲಾಗುತ್ತಿದೆ ಹಾಗೂ ತರಬೇತಿ ನೀಡಲು ಸಾಧ್ಯವಾಗುತ್ತಿರುವ ಜನರೆಷ್ಟು (ವರ್ಷವಾರು ವಿವರ ನೀಡುವುದು)

ಈ) ಹೆಚ್ಚುವರಿ ತರಬೇತಿಗಾಗಿ ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಯೇಷನ್‌ರ ಅನುಮತಿಯನ್ನು ರಾಜ್ಯ ಸರ್ಕಾರ ಕೋರಿದೆಯೇ?

ಶ್ರೀ ಆರ್. ಪಿ. ಜೆಗಜಿಣಗಿ (ಗಣಿ ಹಾಗೂ ಭೂ ವಿಜ್ಞಾನ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು).—

ಅ) ೧೯೮೫-೮೬ ರೂ. ೧೬,೫೨,೦೮೨
೧೯೮೬-೮೭ ರೂ. ೨೮,೧೫,೯೨೦
೧೯೮೭-೮೮ ರೂ. ೧೯,೫೫,೨೭೯

ಆ) ಆರು ತರಬೇತಿ ವಿಮಾನಗಳು (೪ ಆಸನಗಳುಳ್ಳ ಒಂದು ವಿಮಾನ ಸೇರಿ ಸೆಸ್ನಾ ೧೭೨ ಉನ್ನತ ತರಬೇತಿಗಾಗಿ ಈ ವಿಮಾನವನ್ನು ಉಪಯೋಗಿಸಲಾಗುವುದು)

		ತರಬೇತಿದಾರರ ಸಂಖ್ಯೆ
೧೯೮೫-೮೬	...	೪೮
೧೯೮೬-೮೭	...	೯೦
೧೯೮೭-೮೮	...	೧೦೪

ಇ) ೧೯೮೫-೮೬ ... ೧೮೫೭-೫೦ ಗಂಟೆಗಳು
೧೯೮೬-೮೭ ... ೧೬೨೨-೫೫ ಗಂಟೆಗಳು
೧೯೮೭-೮೮ ... ೧೭೯೪-೨೫ ಗಂಟೆಗಳು

ತರಬೇತಿ ನೀಡಲು ಸಾಧ್ಯವಾಗುತ್ತಿರುವ ಜನರು

೧೯೮೫-೮೬	...	೪೮
೧೯೮೬-೮೭	...	೯೦
೧೯೮೭-೮೮	...	೧೦೪

ಈ) ಹೌದು.

ದೇವಲಾಪುರಕ್ಕೆ ಎನ್.ಆರ್.ಡಬ್ಲ್ಯೂ.ಎಸ್. ಪ್ರಾರಂಭ ಆಗಿರುವ ಬಗ್ಗೆ

೨೨೭೭. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೇವಲಾಪುರ ಗ್ರಾಮಕ್ಕೆ ಎನ್.ಆರ್.ಡಬ್ಲ್ಯೂ.ಎಸ್. ಕೆಲಸವು ಎಂದು ಮಂಜೂರಾಯಿತು? ಮತ್ತು ಅದಕ್ಕೆ ಎಷ್ಟು ಹಣ ಮಂಜೂರಾಗಿದೆ?

ಅ) ಈ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಅಬ್ದುಲ್ ನಜೀರ್ ಸಾಬ್.—(ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).

ಅ) ದಿನಾಂಕ ೩೧-೩-೮೭ ರಂದು ೬.೪೬ ಲಕ್ಷ ರೂ.

ಆ) ಹನ್ನೊಂದು ಕೊಳವೆ ಬಾವಿಗಳು ಕೊರೆದಿದ್ದು ಈ ಪೈಕಿ ಹತ್ತು ಕೊಳವೆ ಬಾವಿಗಳು ಯಶಸ್ವಿಯಾಗಿವೆ. ಅವುಗಳಿಗೆ ಕೈಪಂಪು ಜೋಡಿಸಿ ನೀರು ಸರಬರಾಜು ಮಾಡಲಾಗುತ್ತಿದೆ. ಕೊಳವಾಯಿ ನೀರು ಯೋಜನೆಗೆ ಜಲಮೂಲ ಇತ್ಯರ್ಥ ಮಾಡಲು ಪ್ರಯತ್ನ ನಡೆಯುತ್ತಿವೆ. ಕೆಲಸವನ್ನು ೮೯-೯೦ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಮುಂರಕಿಲಾವಿ ಗ್ರಾಮದಲ್ಲಿ ಎನ್.ಆರ್.ಡಬ್ಲ್ಯು.ಎಸ್, ಕೆಲಸದ ಬಗ್ಗೆ

೨೨೨೬. **ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).**—ಮಾನ್ಯ ಗ್ರಾಮಾಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಮುರಕಿಲಾವಿ ಗ್ರಾಮಕ್ಕೆ ಎನ್‌ಆರ್ ಡಬ್ಲ್ಯು ಎಸ್. ಕಾಮಗಾರಿಯು ಎಂದು ಮಂಜೂರಾಯಿತು, ಮತ್ತು ಅದಕ್ಕೆ ಮಂಜೂರಾದ ಹಣವೆಷ್ಟು ?

ಆ) ಈ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು).—

ಅ) ದಿನಾಂಕ ೨೮-೩-೧೯೮೭ ೩.೬೪೫ ಲಕ್ಷ ರೂ. ಗಳು

ಆ) ೧೯೮೮-೮೯ರಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲು ಗುರಿ ಹಾಕಿಕೊಳ್ಳಲಾಗಿದೆ. ಹನ್ನೊಂದು ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು ಈ ಪೈಕಿ ಎಂಟು ಯಶಸ್ವಿ ಆಗಿವೆ. ಮೂರು ಕೊಳವೆ ಬಾವಿಗಳಿಗೆ ಕೈಪಂಪು ಹಾಕಿ ಕೆಲಸ ನಿರ್ವಹಿಸುತ್ತಿವೆ, ಉಳಿದ ಐದು ಕೊಳವೆ ಬಾವಿಗಳಲ್ಲಿ ನೀರು ಕಡಿಮೆಯಾಗಿರುತ್ತದೆ. ಕೊಳವಾಯಿಯಿಂದ ನೀರು ಪೂರೈಕೆ ಮಾಡುವ ಕೆಲಸ ಪ್ರಗತಿಯಲ್ಲಿದೆ.

ಬೈಲಹೊಂಗಲ ತಾಲ್ಲೂಕಿನಲ್ಲಿ ಎನ್.ಆರ್.ಡಬ್ಲ್ಯು.ಎಸ್. ಕೆಲಸದ ಬಗ್ಗೆ

೨೨೨೮. **ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).**—ಮಾನ್ಯ ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ವನ್ನೂರ ಸುಣಕುಪ್ಪಿ ಮತ್ತು ವಂಸ್ತವಾಡಿ ಗ್ರಾಮಕ್ಕೆ ಎನ್.ಆರ್.ಡಬ್ಲ್ಯು.ಎಸ್. ಕೆಲಸವು ಎಂದು ಮಂಜೂರಾಯಿತು ? ಮತ್ತು ಇದಕ್ಕೆ ಎಷ್ಟು ಹಣವು ಮಂಜೂರಾಗಿದೆ ?

ಆ) ಈ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು).—

ಅ) ೩೧-೩-೧೯೮೭ರಂದು ೪.೯೪ ಲಕ್ಷ ರೂ.

ಆ) ಜಲಮೂಲ ನಿಗದಿಪಡಿಸಲು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ, ಆದರೆ ಅವಶ್ಯ ಇಳುವಳಿ ದೊರೆಯದ ಕಾರಣ ಜಲಮೂಲ ಇತ್ಯರ್ಥ ಮಾಡಲು ಪ್ರಯತ್ನ ನಡೆಯುತ್ತಿದೆ. ಸದ್ಯದಲ್ಲಿ